SC No. 23/2024
PW-10

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

ಎಸ್. ಸಿ. 23/2024

| | | |
|---|---|---|
| ಸಾಕ್ಷಿದಾರರ ಹೆಸರು | ಶಿವಮೂರ್ತಿ | ಪ್ರಮಾಣ ವಚನ ಮಾಡಿದ ದಿನಾಂಕ: 18.02.2026 |
| ತಂದೆಯ/ಗಂಡನ ಹೆಸರು | ಮರಿಸ್ವಾಮಿ | |
| ವಯಸ್ಸು | 35 ವರ್ಷ | |
| ವೃತ್ತಿ | ಖಾಸಗಿ ಕೆಲಸ | ಪ್ರಾ.ಸಾಃ 10 |
| ವಾಸ ಸ್ಥಳ | ಹಳೆ ಕೆಸರೆ ಗ್ರಾಮ | ಚಾ.ಸಾಃ 9 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ತೋರಿಸಲಾಯಿತು ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆ ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದು, ಸಾಕ್ಷಿದಾರರ ಸಹಿಯನ್ನು ನಿಪಿ.2 (ಡಿ) ಎಂದು ಗುರುತಿಸಲಾಯಿತು.

ದಿನಾಂಕ 30.03.2023 ರಿಂದ ಹಳೆ ಕೆಸರೆ ಗ್ರಾಮದ ಗಂಗಾ ಲೇಔಟ್ ನಲ್ಲಿ ನಾನು ರಸ್ತೆಯಲ್ಲಿ ಹೋಗುವಾಗ ಸಂಜೆ 4.30–5.30 ಸುಮಾರಿಗೆ ಮುನೇಶ್ವರ ದೇವಸ್ಥಾನದ ಪಕ್ಕದಲ್ಲಿ ಜನರು ನಿಂತಿದ್ದರು ಅಲ್ಲಿ ನನ್ನ ಸಹಿ ತೆಗೆದುಕೊಂಡಿದ್ದರು. ಪೊಲೀಸರು ನಾವು ಇಲ್ಲಿಗೆ ಬಂದಿರುತ್ತೇವೆ ಎನ್ನುವ ಬಗ್ಗೆ ಸಹಿ ಬೇಕು ಎಂದು ಹೇಳಿ ಸಹಿ ತೆಗೆದುಕೊಂಡಿದ್ದರು.

ಪೊಲೀಸರು ಆ ಸ್ಥಳ ಕ್ಕೆ ಏಕೆ ಬಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನಮಗೆ ಯಾರನ್ನು ತೋರಿಸಿರಲಿಲ್ಲ. ನನಗೆ ಮಂಜುಳಾ ಆಗಲೀ ದೀಪು ಆಗಲಿ ಗೊತ್ತಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಏನನ್ನು ಅಮಾನತ್ತು ಪಡಿಸಿಕೊಂಡಿರಲಿಲ್ಲ. ನಾನು ಈ ಹಿಂದೆ ರಕ್ತ ಮ್ರಿಶ್ರಿತ ಕಾಟನ್ ಆಗಲೀ ಮಾದರಿ ಕಾಟನ್ ಆಗಲೀ ನೋಡಿರುವುದಿಲ್ಲ ಮತ್ತು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ ಮತ್ತು ಸ್ಥಳ ದಲ್ಲಿ ನನಗೆ ಸ್ಟೀಲ್ ಚೊಂಬನ್ನು ತೋರಿಸಿರಲಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 30.03.2023 ರಂದು ಹಳೆ ಕೆಸರೆ ಗ್ರಾಮ ಗಂಗಾ ನಾಗರದಲ್ಲಿ ಇರುವ ಮನೆ ನಂಬರ್ 75 ರ ಮನೆಯಲ್ಲಿ ನನ್ನನ್ನು ಮತ್ತು ವಿಕ್ರಮ್ ರವರನ್ನು ಬರಮಾಡಿಕೊಂಡು ಪ್ರಕರಣದ ಸ್ಥಳ ದಲ್ಲಿ ಇದ್ದಂತಹ ವ್ಯಕ್ತಿಯನ್ನು ನಮಗೆ ಪರಿಚಯಿಸಿದ್ದು ಆತನು ಸುನೀಲ್ ಕುಮಾರ್ ಲೇಟ್ ಪ್ರಭಾಕರ್ ಇದ್ದು, ಗಾರೆ ಕೆಲಸ ಮಾಡಿಕೊಂಡಿದ್ದು ದೀಪು ಎಂಬುವರು ಸ್ಥಳ ವನ್ನು ತೋರಿಸಿದ್ದ ಆ ಸ್ಥಳ ದಲ್ಲಿ ನನ್ನ ಮತ್ತು ವಿಕ್ರಮ್ ಸಮಕ್ಷಮ ನಿಪಿ–2 ರಂತೆ

ಪಂಚನಾಮೆ ಮಾಡಿ ಸ್ಥಳ ದಲ್ಲಿ ದೊರೆತ ರಕ್ತ ಮತ್ತು ಸ್ಟೀಲ್ ಚೊಂಬನ್ನು ಹಾಜರುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇದ್ದರುೂ ಸಹ ಆರೋಪಿತನಿಗೆ ಸಹಾಯಾ ಆಗಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**